# ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

ವಾದಿಗಳು ಪ್ರತಿವಾದಿಗಳು

| | |
|---|---|
| ಶ್ರೀಮತಿ ರಮೀಜಾ ಬೀ ಗಂಡ ದಿ: ಖಾಜಾ ಹುಸೇನ್ ವಾಸ:114-ಡಣಾಪುರ | ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ |

ಪೀಠಿಕೆ:-

ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು 114-ಡಣಾಪುರ ಗ್ರಾಮದ ಸ.ನಂ.446/* ವಿಸ್ತೀರ್ಣ 1.18 ಎಕರೆ ಜಮೀನನ್ನು ದಿವಂಗತ ಶ್ರೀ **ಸಾಂಬಣ್ಣ ಹ ಹಳ್ಳಿ** ತಂದೆ ಮೋಹದ್ದೀನ ಸಾಬ ಇವರು ಪಟ್ಟಾ ಹೊಂದಿದ್ದು.ಸದರಿ ಪಟ್ಟದಾರರು ದಿನಾಂಕ 19-01-2005 ರಂದು ಮೃತಪಟ್ಟಿರುತ್ತಾರೆ.ಇವರ ಹೆಂಡತಿಯಾದ ಶ್ರೀಮತಿ ಮಾಬುನ್ನಿ ಇವರು ಸಹ ಪಟ್ಟದಾರರಾದ ದಿ:ಶ್ರೀ ಸಾಂಬಣ್ಣ ಹ ಹಳ್ಳಿ ಇವರು ಮರಣ ಹೊಂದುವ ಪೂರ್ವದಲ್ಲೆ ದಿನಾಂಕ 20-08-1997 ರಂದು ಮರಣ ಹೊಂದಿರುತ್ತಾರೆ.ಇವರ ಮಗನಾದ ಶ್ರೀ ಎಂ.ಖಾಜಾಹುಸೇನ್ ಸಾಬ್ ಇವರು ದಿನಾಂಕ 04-09-2011 ರಂದು ಮರಣ ಹೊಂದಿದ್ದು ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಯಾದ ಶ್ರೀಮತಿ ರಮೀಜಾ ಬೀ ಗಂಡ ದಿ:ಖಾಜಾ ಹುಸೇನ್ ಇವರು ಈ ಕಾರ್ಯಾಲಯದ ಅರ್ಜಿ ಕಿಯೋಸ್ಕದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ ಇವರು ಪ್ರಕ್ರಿಯೆ ಪ್ರಾರಂಭಿಸಲಾಗಿ ಪಹಣಿಯಲ್ಲಿ ಪಟ್ಟದಾರರರ ತಂದೆಯ ಹೆಸರಿಗೆ ಹಾಗೂ ಮರಣ ಪ್ರಮಾಣ ಪತ್ರದಲ್ಲಿನ ಹೆಸರಿಗೆ ವ್ಯತ್ಯಾಸ ಇರುವುದರಿಂದ ಸದರಿ ಹಕ್ಕುಬದಲಾವಣೆಯನ್ನು ಕಂದಾಯ ನಿರೀಕ್ಷಕರು ತಿರಸ್ಕರಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 10-05-2016 ರಂದು ಪ್ರರಂಬಿಸಿ ದಿನಾಂಖ 30-06-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿ ಮತ್ತು ಪ್ರತಿವಾದಿಗಳು ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ.ವಾದಿಗಳು, ನನ್ನ **ಗಂಡನ ತಂದೆಯ ತಂದೆ ಹೆಸರು ಮೋಹದ್ದೀನ ಸಾಬ ಅಲಿಯಾಸ್ ಖಾದರ್ ಸಾಹೇಬ್** ಎಂದು ಇರುವುದಾಗಿ ಹೇಳಿಕೆ ನೀಡಿರುತ್ತಾರೆ. ಕಾರಣ ಪೌತಿ ವಾರಸತ್ವ ಪ್ರಕಾರ ಈ ಕೆಳಗಿನಂತೆ.

ನಂ.ಕಂ.ಪಹಣಿ.ತಕರಾರು/88/14-15 ದಿನಾಂಕ:- 14/07/2016

# ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ವಾಸ್ತಾವಾಂಶ ಹಿನ್ನಲೆ ಯಿಂದಾಗಿ ಹೊಸಪೇಟೆ ತಾಲೂಕಿನ 114-ಡಣಾಪುರ ಗ್ರಾಮದ ಸ.ನಂ.446/* ವಿಸ್ತೀರ್ಣ 1.18 ಎಕರೆ ಜಮೀನನ್ನು ಪೌತಿ ವಾರಸತ್ವ ಪ್ರಕಾರ ವಾದಿಗಳ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಸರಿಯಾದ ದಾಖಲೆಗಳು ಹಾಜರು ಪಡಸದ ಕಾರಣ ಪ್ರಸ್ತುತ ಇದ್ದಂತೆ ಮುಂದುವರಿಸಲು ಆದೇಶಿ ಪ್ರಕರಣವನ್ನು ಮುಕ್ತಾಯಗೊಳಿಸಾಲಿಗಿದೆ

ಈ ಆದೇಶವು ದಿನಾಂಕ 14/07/2016ರ ಉಕ್ತ ಲೇಖನ ನೀಡಿ ತೆರದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಶಿಸಲಾಯಿತು.

ತಹಶೀಲ್ದಾರರು ಹೊಸಪೇಟೆ

ಗೆ

ವಾದಿ ಮತ್ತು ಪ್ರತಿವಾದಿ

1 ಭೂಮಿ ಕೇಂದ್ರ

2 ಕಂದಾಯ ಪರಿ ವೀಕ್ಷಕರು ಮರಿಯಮ್ಮನಹಳ್ಳಿ